## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಹಿರಿಯೂರು.

**ಸಿ.ಸಿ ಸಂಖ್ಯೆ: 13/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಆನಂದ್ | ಸಿಡಬ್ಲ್ಯೂ-16 |
| ತಂದೆಯ ಹೆಸರು | - | ಈರಣ್ಣ | ಪಿಡಬ್ಲ್ಯೂ-5 |
| ವಯಸ್ಸು | - | ಸು. 59 ವರ್ಷ | ಪ್ರ.ವ.ಬೋ<br>ದಿನಾಂಕ:25.09.2024 |
| ಉದ್ಯೋಗ | - | ಸಂಚಾರಿ ಪೂರ್ವ ಪೊಲಿಸ್ ಠಾಣೆ<br>ಪೊಲೀಸ್ ನಿರೀಕ್ಷಕರು | |
| ವಾಸ | - | ಮಂಗಳೂರು | |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ಯವರಿಂದ:-**

ನಾನು ಅಕ್ಟೋಬರ್ 2021 ರಿಂದ ಜನವರಿ 2023 ರ ವರೆಗೆ ಗೆ ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ, ಪೊಲೀಸ್ ನಿರೀಕ್ಷಕನಾಗಿ ಕೆಲಸ ನಿರ್ವಹಿಸಿರುತ್ತೇನೆ.

ದಿನಾಂಕ: 05.09.2022 ರಂದು ಈ ಪ್ರಕರಣದ ಕಡತವನ್ನು ಚಾಸಾ.15 ರವರಿಂದ ಪಡೆದುಕೊಂಡಿರುತ್ತೇನೆ. ಹಿರಿಯೂರು ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಶವಾಗಾರದಿಂದ ಪಾಂಡುರಂಗ ಶಿವಸಾಗರ್ ರವರ ಶವ ತನಿಖೆಯನ್ನು ಚಸಾಾ.5, 6 ರವರ ಸಮಕ್ಷಮ ಬೆಳಿಗ್ಗೆ 6 ರಿಂದ 8 ರ ವರೆಗೆ ಕೈಗೊಂಡಿದ್ದು ಆ ಸಮಯದಲ್ಲಿ ಸಾಕ್ಷಿದಾರರಾದ ಚಾಸಾ.7, 8 ರವರ ಹೇಳಿಕೆ ಪಡೆದಿದ್ದೇನೆ. ಸಾಕ್ಷಿ ಶವ ಪಂಚನಾಮೆ ನಿಪಿ-6 ರಲ್ಲಿ ಸಹಿ ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಅದೇ ದಿನ ಅಪಘಾತಕ್ಕೀಡಾದ ಕಾರನ್ನು ಪರಿಶೀಲಿಸಿ ವರದಿ ನೀಡಲು ಆರ್ ಟಿ ಒ ರವರಿಗೆ ಮನವಿ ಮಾಡಿದ್ದೇನೆ. ದಿ:08.08.2022 ರಂದು ಹಿರಿಯೂರು ಸರ್ಕಾರಿ ಆಸ್ಪತ್ರೆಯಿಂದ ಮೃತ ಪಾಂಡುರಂಗ ಇವರ ಪಿ ಎಂ ವರದಿ ಸ್ವೀಕರಿಸಿದ್ದೇನೆ. ಸದರಿ ಪಿ ಎಂ ವರದಿ ನಿಪಿ-7 ರಲ್ಲಿ ಸಹಿ ನೋಡಿ

ಗುರುತಿಸಿದ್ದು ಸಹಿಯನ್ನು ನಿಪಿ–7(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿದಾರರಾದ ಚಾಸಾ.2 ರವರ ಹೇಳಿಕೆ ಪಡೆದಿದ್ದೇನೆ.

ದಿಃ04.09.2022 ರಂದು ಆರ್ ಟಿ ಒ ರವರಿಂದ ಐ ಎಂ ವಿ ವರದಿ ಸ್ವೀಕರಿಸಿದ್ದೇನೆ ಸದರಿ ವರದಿ ಸಾಕ್ಷಿ ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ–8(ಎ) ಎಂದು ಗುರುತಿಸಲಾಯಿತು. ದಿಃ20.10.2022 ರಂದು ಅಪಘಾತಕ್ಕಿಡಾದ ಎಂ ಹೆಚ್ 45.ಎ ಎಲ್ 6367 ರ ಕಾರಿನ ಮಾಲೀಕರಿಗೆ ಕಲಂ 133 ರಂತೆ ನೋಟೀಸ್ ನೀಡಿ ಅವರಿಂದ ಉತ್ತರ ಪಡೆದಿದ್ದೇನೆ. ಇಂಡಿಮ್ನಿಟಿ ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ. ನೋಟೀಸನ್ನು ನಿಪಿ–11 ಎಂದು ಉತ್ತರವನ್ನು ನಿಪಿ–12 ಎಂದು ಇಂಡಮ್ನಿಟಿ ಬಾಂಡನ್ನು ನಿಪಿ–13 ಎಂದು ಗುರುತಿಸಲಾಯಿತು. ಸಹಿಗಳನ್ನು ನಿಪಿ–11(ಎ) 13(ಎ) ಎಂದು ಗುರುತಿಸಲಾಯಿತು. ಉತ್ತರದಲ್ಲಿ ಆರೋಪಿ ಆ ದಿನ ವಾಹನ ಚಾಲನೆ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ಅದೇ ದಿನ ಆರೋಪಿಯನ್ನು ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆರೋಪಿಯನ್ನುನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಿದ್ದು ಆರೋಪಿ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ವಾಹನ ಬಿಡುಗಡೆ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು 14 ಮತ್ತು ಸಹಿಯನ್ನು ನಿಪಿ–14(ಎ) ಎಂದು ಗುರುತಿಸಲಾಯಿತು. ಚಾಸಾ.1 ಮತ್ತು ಆರೋಪಿಯ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರುತ್ತೇನೆ ಸಾಕ್ಷಿ ಸಹಿಗಳನ್ನು ನಿಪಿ–9(ಎ) ಮತ್ತು 10(ಎ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿ ಚಾಲನಾ ಪರವಾನಿಗೆ ಇಲ್ಲದೆ ಚಾಲನೆ ಮಾಡಿದ್ದರಿಂದ ಕಲಂ.188 ಎಂ ವಿ ಮತ್ತು 338 ಐ ಪಿ ಸಿ ಅಳವಡಿಸಿ ಹೆಚ್ಚುವರಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ.

**ಪಾಟೀ–ಸವಾಲುಃ ಆರೋಪಿ ಪರ ಶ್ರೀ ಬಿ ಕೆ ವಕೀಲರಿಂದಃ–**

ದಿನಾಂಕಃ 05.09.2022 ರಂದು ಈ ಪ್ರಕರಣದ ಕಡತವನ್ನು ಚಾಸಾ.15 ರವರಿಂದ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಹಿರಿಯೂರು ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿಲ್ಲ ಶವಾಗಾರದಿಂದ ಪಾಂಡುರಂಗ ಶಿವಸಾಗರ್ ರವರ ಶವ ತನಿಖೆಯನ್ನು ಚಾಸಾ.5, 6 ರವರ ಸಮಕ್ಷಮ ಬೆಳಿಗ್ಗೆ 6 ರಿಂದ 8 ರ ವರೆಗೆ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸಾಕ್ಷಿದಾರರಾದ ಚಾಸಾ.7, 8 ರವರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

ಅದೇ ದಿನ ಅಪಘಾತಕ್ಕೀಡಾದ ಕಾರನ್ನು ಪರಿಶೀಲಿಸಿ ವರದಿ ನೀಡಲು ಆರ್ ಟಿ ಒ ರವರಿಗೆ ಮನವಿ ನೀಡಿಲ್ಲ ಎಂದರೆ ಸರಿಯಲ್ಲ. ದಿಃ08.08.2022 ರಂದು ಹಿರಿಯೂರು ಸರ್ಕಾರಿ ಆಸ್ಪತ್ರೆಯಿಂದ ಮೃತ ಪಾಂಡುರಂಗ ಇವರ ಪಿ ಎಂ ವರದಿ ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಸಾಕ್ಷಿದಾರರಾದ ಚಾಸಾ.2 ರವರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

ದಿಃ04.09.2022 ರಂದು ಆರ್ ಟಿ ಒ ರವರಿಂದ ಐ ಎಂ ವಿ ವರದಿ ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ದಿಃ20.10.2022 ರಂದು ಅಪಘಾತಕ್ಕಿಡಾದ ಎಂ ಹೆಚ್ 45.ಎ ಎಲ್ 6367 ರ ಕಾರಿನ ಮಾಲೀಕರಿಗೆ ಕಲಂ 133 ರಂತೆ ನೋಟೀಸ್ ನೀಡಿಲ್ಲ, ಅವರಿಂದ ಉತ್ತರ ಪಡೆದಿಲ್ಲ ಎಂದರೆ ಸರಿಯಲ್ಲ. ಇಂಡಿಮ್ನಿಟಿ ಬಾಂಡ್ ಪಡೆದು ವಾಹನ ಬಿಡುಗಡೆ ಮಾಡಿಲ್ಲ ಎಂದರೆ ಸರಿಯಲ್ಲ. ಉತ್ತರದಲ್ಲಿ ಆರೋಪಿ ಆ ದಿನ ವಾಹನ ಚಾಲನೆ ಮಾಡುತ್ತಿದ್ದ ಎಂದು ತಿಳಿಸಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ.

ವಾಹನ ಬಿಡುಗಡೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ.1 ಮತ್ತು ಆರೋಪಿಯ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ ಅದೇ ದಿನ ಆರೋಪಿ ಚಾಲನಾ ಪರವಾನಿಗೆ ಇಲ್ಲದೆ ಚಾಲನೆ ಮಾಡಿದ್ದರಿಂದ ಕಲಂ.188 ಎಂ ವಿ ಮತ್ತು 338 ಐ

ಪಿ ಸಿ ಅಳವಡಿಸಿ  ಹೆಚ್ಚುವರಿ ದೋಷಾರೋಪಣ ಪಟ್ಟಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.